ಕರ್ನಾಟಕ ಸರ್ಕಾರ

Government of Karnataka

ಕರ್ನಾಟಕ ಪರೀಕ್ಷಾ ಪ್ರಾಧಿಕಾರ Karnataka Examinations Authority

ಬೆಂಗಳೂರು Bangalore

## UGNEET-2020 - Provisional documents Verified list

## ಯುಜಿನೀಟ್-2020 – ತಾತ್ಕಾಲಿಕ ಪರಿಶೀಲನಾ ಪಟ್ಟಿ

ಯುಜಿನೀಟ್-2020 ರ ಪ್ರವೇಶಾತಿಗೆ ನಿಗದಿಪಡಿಸಿರುವ ಅರ್ಹತಾ ಮಾನದಂಡಗಳ ಅನುಸಾರ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಿಂದ Verification Acknowledgement Slip ಡೌನ್‌ಲೋಡ್ ಮಾಡಿಕೊಳ್ಳ ಬಹುದಾಗಿದೆ.

As per the eligibility conditions prescribed for admission to UGNEET-2020, Provisional list of documents verified list is hosted on the KEA Website and the candidates can download the "Verification Acknowledgment Slip" from the KEA Website.

### STEPS to DOWNLOAD VERIFICATION ACKNOWLEDGMENT SLIP

- ✓ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ನಿಗದಿತ ಲಿಂಕ್ ಆಯ್ಕೆ ಮಾಡಿಕೊಂಡು, ಅಭ್ಯರ್ಥಿಗಳು ತಮ್ಮ USER ID and Password ದಾಖಲಿಸಿ, ಲಾಗಿನ್ ಆಗಿ ನಂತರ Download Verification Slip ಅನ್ನು ಆಯ್ಕೆ ಮಾಡಿಕೊಂಡಲ್ಲಿ, ಅಭ್ಯರ್ಥಿಗಳ ಮೊಬೈಲ್ ಸಂಖ್ಯೆಗೆ OTP ಸ್ವೀಕೃತವಾಗುತ್ತದೆ, ಅದೇ OTP ಯನ್ನು ದಾಖಲಿಸಿ Verification Acknowledgement Slip ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.
- ✓ After selecting the appropriate link on the KEA Website, candidates have to enter their USER ID and Password, login to the portal, select the tab titled as "Download Verification Slip", then enter the OTP received to mobile number and download the Verification Acknowledgement Slip.
- ✓ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಿಂದ Verification Acknowledgement Slip ಅನ್ನು ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ಮುದ್ರಿಸಲಾಗಿರುವ ಎಲ್ಲಾ ಮಾಹಿತಿಯನ್ನು ಪರಿಶೀಲಿಸಿಕೊಳ್ಳಲು ಸೂಚಿಸಿದೆ.
- ✓ Candidates have to download the Verification Acknowledgement Slip from the Website and they are instructed to confirm the details printed on the Document Verification Slip.

**ರಹಸ್ಯ ಸಂಕೇತಾಕ್ಷರ (SECRET KEY) :** ಅತ್ಯಂತ ಹೆಚ್ಚಿನ ಭದ್ರತೆಯುಳ್ಳ ರಹಸ್ಯ ಸಂಕೇತಾಕ್ಷರಗಳನ್ನು Document Verified Acknowledgement ನಲ್ಲಿ ಇತರೆ ಮಾಹಿತಿಗಳೊಂದಿಗೆ ಮುದ್ರಿಸಲಾಗಿದೆ. ಅಭ್ಯರ್ಥಿಯು ಈ ರಹಸ್ಯ ಸಂಕೇತಾಕ್ಷರಗಳನ್ನು, ಸಿಇಟಿ–2020 ರ ಆನ್‌ಲೈನ್ ಇಚ್ಛೆ ನಮೂದು ಪೋರ್ಟಲ್‌ನಲ್ಲಿ ಲಾಗಿನ್ ಆಗುವುದಕ್ಕಾಗಿ ಆತನ/ ಆಕೆಯ ಆಯ್ಕೆಗನುಸಾರವಾಗಿ ನೋಂದಣಿ ಮಾಡಿಕೊಳ್ಳುವುದಕ್ಕಾಗಿ ಹಾಗೂ ಪಾಸ್‌ವರ್ಡ್ ಅನ್ನು ಸೃಜಿಸುವುದಕ್ಕಾಗಿ ಬಳಸಬೇಕಿರುತ್ತದೆ. ಯಾವುದೇ ಕಾರಣದಿಂದ, ಈ ರಹಸ್ಯ ಸಂಕೇತಾಕ್ಷರ ಮತ್ತು ಪಾಸ್‌ವರ್ಡ್‌ಅನ್ನು ಬೇರೆಯವರಿಗೆ ತಿಳಿಸಬಾರದು ಅಥವಾ ಬಹಿರಂಗಪಡಿಸಬಾರದು. ಹಾಗೇನಾದರೂ ಮಾಡಿದ್ದೇ ಆದಲ್ಲಿ, ಅದನ್ನು ತಿಳಿದುಕೊಂಡವರು ವಿದ್ಯಾರ್ಥಿಗಳು ನಮೂದಿಸಿರುವ ಇಚ್ಛೆಗಳನ್ನು ಮಾರ್ಪಾಡು ಮಾಡುವುದಕ್ಕೆ / ತಿದ್ದುವುದಕ್ಕೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. **ಪಾಸ್‌ವರ್ಡ್ ಮತ್ತು ರಹಸ್ಯ ಸಂಕೇತಾಕ್ಷರಗಳ ಗೌಪ್ಯತೆಯನ್ನು ಕಾಪಾಡಿಕೊಳ್ಳುವುದಕ್ಕೆ ವಿದ್ಯಾರ್ಥಿಗಳೇ ಸಂಪೂರ್ಣ ಹೊಣೆಗಾರರಾಗಿರುತ್ತಾರೆ.** ಈ ಸಂಬಂಧದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ. ಪಾಸ್‌ವರ್ಡ್ ಅತ್ಯಂತ ಪ್ರಮುಖವಾದ ಸಂಗತಿಯಾಗಿರುತ್ತದೆ. ಆದ್ದರಿಂದ ಅದನ್ನು ರಹಸ್ಯವಾಗಿ ಇಟ್ಟುಕೊಳ್ಳಬೇಕಾಗಿರುತ್ತದೆ. ಇದು ಎಟಿಎಂ ಕಾರ್ಡ್‌ನ ಪಿನ್ ನಂಬರ್‌ನಷ್ಟೇ ಗೌಪ್ಯವಾದುದು. ವಿದ್ಯಾರ್ಥಿಯು ಲಾಗಿನ್ ಆಗಲು, ಇಚ್ಛೆಗಳನ್ನು ನಮೂದಿಸಲು, ಇಚ್ಛೆಗಳನ್ನು ಬದಲಾಯಿಸಲು, ಇಚ್ಛೆಗಳನ್ನು ಉಳಿಸಲು ಮತ್ತು ಅಳಿಸಲು ಹಾಗೂ ಹಂಚಿಕೆ ವಿವರಗಳ ಮುದ್ರಿತ ಪ್ರತಿ ತೆಗೆದುಕೊಳ್ಳಲು ಇದು ಅತ್ಯಾವಶ್ಯಕವಾಗಿರುತ್ತದೆ.

**SECRET KEY:** Along with the other details, high security secret key will be printed on the verification slip. The candidate has to use this secret key to register and create a password as per his/her choice for login at online option entry portal for CET-2020. For any reason secret key and Password should not be made known or revealed to others as it might enable modification / tampering options. The Candidate will solely be responsible for maintaining secrecy of the Password and secret key. KEA will not take any responsibility in this regard. Password is important and shall be held confidentially. It is as important as the PIN of ATM card. Password is essential for candidate's login, entry of options, change of options, saving and deletion of options and for printing of allotment details.

- ✓ Candidates whose names are in the provisional verified list can download the Medical / Dental verification slip for Medical and Dental courses. (Those who have already downloaded verifications slip for engineering and other courses should compulsorily download the Medical / Dental verification slip to become eligible for Medical / Dental courses )

  ತಾತ್ಕಾಲಿಕ ಪರಿಶೀಲನೇ ಪಟ್ಟಿಯಲ್ಲಿ ತೋರಿಸಿರುವ ಅರ್ಹ ಅಭ್ಯರ್ಥಿಗಳು ವೆರಿಫಿಕೇಶನ್ ಸ್ಲಿಪ್ ಅನ್ನು ಡೌನ್ ಲೋಡ್ ಮಾಡಿಕೊಳ್ಳಬೇಕು. ಈಗಾಗಲೆ ಇಂಜಿನಿಯರಿಂಗ್ ಕೋರ್ಸುಗಳಿಗೆ ಡೌನ್‌ಲೋಡ್ ಮಾಡಿರುವವರೂ ಸಹ ವೈದ್ಯಕೀಯ / ದಂತವೈದ್ಯಕೀಯ ಕೋರ್ಸುಗಳಿಗೆ ಪ್ರತ್ಯೇಕವಾಗಿ ವೆರಿಫಿಕೇಶನ್ ಸ್ಲಿಪ್ ಅನ್ನು ಕಡ್ಡಾಯವಾಗಿ ಡೌನ್‌ಲೋಡ್ ಮಾಡಿಕೊಳ್ಳಬೇಕು.

- ✓ Further, the candidates whose names listed in the rejected list due to non-compliance of eligibility conditions prescribed for UGNEET-2020 can also upload the relevant documents before 4.00 pm on 19-11-2020.

  ಯುಜಿನೀಟ್–2020 ರ ಪ್ರವೇಶಾತಿಗೆ ನಿಗದಿಪಡಿಸಿರುವ ಅರ್ಹತಾ ಮಾನದಂಡಗಳ ಅನುಸಾರ ಯಾವ ಅರ್ಹತಾ ದಾಖಲೆಗಳನ್ನು UPLOAD ಮಾಡದಿರುವ ಕಾರಣಕ್ಕೆ ತಿರಸ್ಕರಿಸಲಾಗಿದೆಯೋ ಅಂತಹ ಅರ್ಹತಾ ದಾಖಲೆಗಳನ್ನು ದಿನಾಂಕ 19–11–2020 ಸಂಜೆ 6.00ರೊಳಗಾಗಿ ಅಂತಹ ದಾಖಲೆಗಳನ್ನು UPLOAD ಮಾಡಲು ಅವಕಾಶ ಕಲ್ಪಿಸಲಾಗಿದೆ.

- ✓ Documents uploaded but not claimed in the online application have not been considered for verification; hence such candidates should not upload the same documents once again.

  ಅರ್ಜಿಯಲ್ಲಿ ಕ್ಲೇಮ್ ಮಾಡದೇ ಇರುವ ಅಥವಾ ತಪ್ಪಾಗಿ ಕ್ಲೇಮ್ ಮಾಡಿ ದಾಖಲೆಗಳನ್ನು UPLOAD ಮಾಡಿದ್ದರೂ ಅಂತಹ ದಾಖಲೆಗಳನ್ನು ಪುರಸ್ಕರಿಸಿರುವುದಿಲ್ಲ. ಆದ್ದರಿಂದ ಅಂತಹ ಅಭ್ಯರ್ಥಿಗಳು ಮತ್ತೊಮ್ಮೆ ಪುನಹ ಅದೇ ದಾಖಲೆಗಳನ್ನು UPLOAD ಮಾಡಬಾರದು.

- ✓ Final chance is given to upload the documents before 4.00 pm on 19-11-2020 to the candidates who were not able to upload the documents as per eligibility conditions prescribed for UGNEET-2020.

  ಇಲ್ಲಿಯವರೆಗೆ ನಿಗದಿತ ದಾಖಲೆಗಳನ್ನು UPLOAD ಮಾಡದಿರುವ ಅಭ್ಯರ್ಥಿಗಳಿಗೆ ಅರ್ಹತೆಗೆ ಅನುಸಾರ ದಾಖಲೆಗಳನ್ನು UPLOAD ಮಾಡಲು ಅಂತಿಮ ಅವಕಾಶ ಕಲ್ಪಿಸಿದ್ದು, ದಿನಾಂಕ 19–11–2020ರ ಸಂಜೆ 4.00 ರೊಳಗೆ ಅಂತಹ ದಾಖಲೆಗಳನ್ನು UPLOAD ಮಾಡಬಹುದಾಗಿದೆ.

ದಿನಾಂಕ: 18–11–2020 ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

ಬೆಂಗಳೂರು